

# ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

SARAYU - Kannada Monthly Regn. No. KARKAN/2014/62363
December Vol. : 9 Issue : 7 5124/ಶುಭಕೃತ್ ಸಂವತ್ಸರ 2022 ದಶಂಬರ್ ಪುಟ 8 Rs. 10/-

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24

3.11.22

## ಶ್ರೀರಾಮ ಪ್ರೌಢಶಾಲಾ ವಿಭಾಗದ ವಿಜ್ಞಾನ ಪ್ರಯೋಗಾಲಯ ವಿಕ್ರಮ ಸಾರಾಭಾಯಿ ಉದ್ಘಾಟನೆ



ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ ವಿಷಯಗಳನ್ನೊಳಗೊಂಡ, ಸುಸಜ್ಜಿತ ವಿಜ್ಞಾನ ಪ್ರಯೋಗಾಲಯವನ್ನು ಮುಂಬೈನ ಉದ್ಯಮಿ ಶ್ರೀ ನಿದರ್ಶನ್ ಗೋವಾನಿ (ಡೈರೆಕ್ಟರ್ ಆಫ್ ಮ್ಯಾನೇಜ್ಮೆಂಟ್ ಟ್ರಸ್ಟಿ, ಕಮಲ ಅಂಕಿಬಾಯಿ ಗೋಮಂದಿರಂ) ಇವರು ಪರದೆ ಸರಿಸಿ, ಶ್ರೀಮತಿ ಶಕುಂತಲ ಅಯ್ಯರ್, (ಸಿ.ಇ.ಒ. ಸುಭಿಕ್ಷ ಫಾರ್ಮಸ್ ಸೊಸೈಟಿ ಬೆಂಗಳೂರು) ಇವರು ದೀಪ ಬೆಳಗಿ ಉದ್ಘಾಟಿಸಿದರು. ವಿದ್ಯಾರ್ಥಿಗಳು ತಯಾರಿಸಿದ ವಿವಿಧ ವಸ್ತು ಪ್ರದರ್ಶನಗಳು ಅತಿಥಿಗಳ ಗಮನ ಸೆಳೆಯಿತು. ಪಿಯುಸಿ ವಿದ್ಯಾರ್ಥಿ ರಂಜಿತ್ ಸಹಕಾರದಲ್ಲಿ 8ನೇ ತರಗತಿಯ ಗೀತೇಶ್ ಮತ್ತು ಯತೀಶ್ ಇವರ **ರಿಮೋಟ್ ಮೂಲಕ ಪಟಾಕಿ ಸಿಡಿಸುವ ತಂತ್ರಜ್ಞಾನ** ಎಲ್ಲರ ಪ್ರಶಂಸೆಗೆ ಪಾತ್ರವಾಯಿತು.

## ಶ್ರೀರಾಮ ಪದವಿ ಕಾಲೇಜಿನ 2022-23ನೇ ಶೈಕ್ಷಣಿಕ ವರ್ಷದ ಪ್ರವೇಶೋತ್ಸವ - ಆಗತ ಸ್ವಾಗತ





ಪ್ರಥಮ ಪದವಿ ತರಗತಿಗಳಿಗೆ ದಾಖಲಾದ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಆಗತ-ಸ್ವಾಗತ ಕಾರ್ಯಕ್ರಮ ಆಜಾದ್ ಭವನದಲ್ಲಿ ಸಂಪನ್ನಗೊಂಡಿತು. ವಿದ್ಯಾರ್ಥಿಗಳನ್ನು ಆರತಿ ಬೆಳಗಿ, ತಿಲಕವಿಟ್ಟು, ಸ್ವಾಗತಿಸಲಾಯಿತು.

ಅವರುಗಳು ಅಗ್ನಿಗೆ ಘೃತಾಹುತಿ ನೀಡಿ ಭಾರತಮಾತೆಗೆ ಪುಷ್ಪಾರ್ಚನೆಗೈದು ಹಿರಿಯರ ಆಶೀರ್ವಾದ ಪಡೆದರು. ಪ್ರಥಮ ಬಿ.ಸಿ.ಎ 62, ಬಿ.ಎ 13, ಬಿ.ಕಾಂ.ಗೆ 32 ವಿದ್ಯಾರ್ಥಿಗಳನ್ನು ಸ್ವಾಗತಿಸಲಾಯಿತು.

ಈ ಎರಡೂ ಕಾರ್ಯಕ್ರಮದಲ್ಲಿ ಶ್ರೀ ರಮೇಶ್ ಗೋವಾನಿ (ಮಾಲಕರು ಕಮಲ ಗ್ರೂಪ್ ಮುಂಬೈ), ಶ್ರೀ ವಿವೇಕ್ ಮಿತ್ತಲ್ (ರಿಯಲ್ ಎಸ್ಟೇಟ್ ಉದ್ಯಮಿ ಮುಂಬೈ), ಶ್ರೀ ಪವನ್‌ಚಂದ್ರ ಶೆಟ್ಟಿ (ವಕೀಲರು ಕರ್ನಾಟಕ ಉಚ್ಚ ನ್ಯಾಯಾಲಯ), ಶ್ರೀ ವಿಶಾಲ್ ಸಾಲಿಯಾನ್ (ಅಧ್ಯಕ್ಷರು, ಸಣ್ಣ ಕೈಗಾರಿಕಾ ಉದ್ಯಮ ದ.ಕ) ಹಾಗೂ ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ಶ್ರೀ ವಸಂತ ಮಾಧವ, ಶ್ರೀ ರಮೇಶ್ ಎನ್. ಮತ್ತು ಸಂಸ್ಥೆಯ ಹಿರಿಯರು ಉಪಸ್ಥಿತರಿದ್ದರು.

## ತೋಟಗಾರಿಕೆ ವಿಭಾಗದಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ.



19.11.2022ರಂದು ನಡೆದ ದ.ಕ ಜಿಲ್ಲಾಮಟ್ಟದ ಶೈಕ್ಷಣಿಕ ವೃತ್ತಿಶಿಕ್ಷಣ ಮತ್ತು ಕಲೋತ್ಸವದಲ್ಲಿ ಶ್ರೀರಾಮ ಪ್ರೌಢಶಾಲಾ ತಂಡ ತೋಟಗಾರಿಕೆ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದೆ. ಸಂಸ್ಥೆಯಲ್ಲಿ ನಿರ್ಮಿಸಿದ ಕೈತೋಟ ಹಾಗೂ ಕೃಷಿ ಚಟುವಟಿಕೆಗಳ ಆಧಾರದಲ್ಲಿ ನಡೆದ ಸ್ಪರ್ಧೆ ಇದಾಗಿದ್ದು, ಇಲ್ಲಿ ಬೆಳೆದ ಸಾವಯವ ಭತ್ತ, ತರಕಾರಿ ಇತ್ಯಾದಿಗಳನ್ನು ಪ್ರದರ್ಶನಕ್ಕಿಡಲಾಯಿತು.

## ರಾಷ್ಟ್ರ ಮಟ್ಟದ ಅಥ್ಲೆಟಿಕ್ ಸ್ಪರ್ಧಾ ವಿಜೇತರು - 19.11.2022



ಪ್ರೇಕ್ಷಾ
ದ್ವಿ. ವಾಣಿಜ್ಯ
ಉದ್ದ ಜಿಗಿತ
ಬೆಳ್ಳಿ ಪದಕ



ಶ್ರೀಜೇಶ್
ದ್ವಿ. ವಿಜ್ಞಾನ
4*400 ರಿಲೇ
ಕಂಚಿನ ಪದಕ



ಶ್ರೀಹರಿ
ದ್ವಿ. ವಾಣಿಜ್ಯ
ತ್ರಿವಿಧ ನೆಗೆತ
ಕಂಚಿನ ಪದಕ



ಜಯಲಕ್ಷ್ಮೀ
ಪ್ರ. ವಿಜ್ಞಾನ
ಎತ್ತರ ಜಿಗಿತ
ಕಂಚಿನ ಪದಕ

ಹರಿಯಾಣದ ಕುರುಕ್ಷೇತ್ರದಲ್ಲಿ ನಡೆದ ವಿದ್ಯಾಭಾರತಿ ರಾಷ್ಟ್ರೀಯ ಮಟ್ಟದ ಅಥ್ಲೆಟಿಕ್ ಚಾಂಪಿಯನ್ ಶಿಪ್‌ನಲ್ಲಿ ಶ್ರೀರಾಮ ಪದವಿಪೂರ್ವ ವಿದ್ಯಾಲಯವನ್ನು ಪ್ರತಿನಿಧಿಸಿರುತ್ತಾರೆ.



ಹೊರಸಂಚಾರ 10.11.2022: ಕಾರಿಂಜೇಶ್ವರ ದೇವಸ್ಥಾನ, ಸಾಲು ಮರದ ತಿಮ್ಮಕ್ಕ ಉದ್ಯಾನವನ, ಮತ್ತು ಬಿ.ಸಿ.ರೋಡ್ ರೈಲ್ವೆ ನಿಲ್ದಾಣ. 120 ಮಕ್ಕಳು, 3 ಮಂದಿ ಅಭಿವೃದ್ಧಿ ಸಮಿತಿ ಸದಸ್ಯರು ಭಾಗಿ.





ಉತ್ಥಾನ ದ್ವಾದಶಿಯಂದು ವಿವಿಧ ಶಿಶುಮಂದಿರಗಳಲ್ಲಿ ತುಳಸಿ ಪೂಜೆ ಹಾಗೂ ಗೋಪೂಜೆ ಕಾರ್ಯಕ್ರಮಗಳು ನಡೆದಿದ್ದು, ಪಾಲಕರು ಹಾಗೂ ಪುಟಾಣಿಗಳು ಭಾಗವಹಿಸಿದ್ದರು. ಶಿಶುಗಳು ಗೋವುಗಳಿಗೆ ಗೋಗ್ರಾಸ ನೀಡಿ ಸಂಭ್ರಮಿಸಿದರು.



10–11–2022. ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಇಲ್ಲಿನ ಬೈಠಕ್‌ನಲ್ಲಿ ಶ್ರೀ ವಸಂತ ಮಾಧವ, ಶಿಶುಮಂದಿರದ ಅಧ್ಯಕ್ಷರಾದ ಶ್ರೀ ಪ್ರಮೋದ್ ಕುಮಾರ್ ಹಾಗೂ ಕಾರ್ಯದರ್ಶಿ ಲಕ್ಷ್ಮಣ್ ಅಗ್ರಬೈಲು, 30 ಮಂದಿ ಪಾಲಕರು, 7 ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.



**ಪಾಲಕರ ಸಭೆ 25.11.2022:** ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿ ಉಪಸ್ಥಿತರಿದ್ದರು. ಮಕ್ಕಳಿಗೆ ಕೊಡುವಂತಹ ವಿವಿಧ ರೀತಿಯ ಆಟಿಕೆಗಳನ್ನು ಪಾಲಕರಿಗೆ ನೀಡಿ ಚಟುವಟಿಕೆಗಳನ್ನು ಪ್ರಾಯೋಗಿಕವಾಗಿ ಬಳಸುವ ಅನುಭವ ಪಡೆದುಕೊಂಡರು.



**ಸಾಮೂಹಿಕ ಹುಟ್ಟು ಹಬ್ಬ 30.11.2022** ಶಿಶುಮಂದಿರದ ವ್ಯವಸ್ಥಾಪಕರಾದ ಶ್ರೀಮತಿ ಸುಧಾ ಭಟ್ ಹುಟ್ಟುಹಬ್ಬ ಆಚರಣೆ ಬಗ್ಗೆ ಮಾತನಾಡಿದರು. ಆಡಳಿತ ಮಂಡಳಿ ಸದಸ್ಯರು, 2 ಜೋಡಿ ದಂಪತಿಗಳು ಸೇರಿ 10 ಪಾಲಕರು ಮತ್ತು 161 ಮಕ್ಕಳು ಉಪಸ್ಥಿತರಿದ್ದರು.

## ಪ್ರಾಥಮಿಕ ಶಾಲೆ



**ವಲಯ ಕ್ರೀಡಾಕೂಟ : 1.11.22 ಮತ್ತು 2.11.22**

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬಂಟ್ವಾಳ ಶ್ರೀರಾಮ ಪ್ರಾಥಮಿಕ ಶಾಲೆ ಬಾಳ್ತಿಲ ಕ್ಲಸ್ಟರ್ ಇದರ ಸಂಯುಕ್ತ ಆಶ್ರಯದಲ್ಲಿ ಕಲ್ಲಡ್ಕ ವಲಯ ಮಟ್ಟದ ಪ್ರಾಥಮಿಕ, ಪ್ರೌಢಶಾಲೆಗಳ ಎರಡು ದಿನದ ಕ್ರೀಡಾಕೂಟವನ್ನು ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಉದ್ಘಾಟಿಸಿ ಶುಭ ಹಾರೈಸಿದರು.



ತಾಲೂಕು ಮಟ್ಟಕ್ಕೆ ಆಯ್ಕೆ : 2.11.2022

ಕಲ್ಲಡ್ಕ ವಲಯ ಕ್ರೀಡಾಕೂಟದಲ್ಲಿ ಬಾಲಕಿಯರ ವಿಭಾಗದಲ್ಲಿ 7ನೇ ತರಗತಿಯ ಚಿನ್ಮಯಿ, ದಿಶಾಲಿ, ಸಾನ್ವಿ, ಶ್ರೇಯಾ, ಚಿಂತನ್, ಲವಿತ್, ಹರ್ಷಿತ್, ಶ್ರವಣ್, ಅನ್ವಿತ್ ತಾಲೂಕು ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.



ತಾಲೂಕು ಮಟ್ಟದ ಪ್ರತಿಭಾ ಕಾರಂಜಿ : 3.11.2022

ಎಸ್.ವಿ.ಎಸ್ ದೇವಳ ಆಂಗ್ಲಮಾಧ್ಯಮ ಶಾಲೆ, ಬಂಟ್ವಾಳ ಇಲ್ಲಿ ನಡೆದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಶ್ರೀರಾಮ ಪ್ರಾ. ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ, 3 ಪ್ರಥಮ, 2 ದ್ವಿತೀಯ, ಹಾಗೂ 1 ತೃತೀಯ ಸ್ಥಾನ ಪಡೆದಿರುತ್ತಾರೆ.



**1ನೇ ತರಗತಿ ಪ್ರವಾಸ : 4.11.2022**

1ನೇ ತರಗತಿಯ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸವನ್ನು ಶಿಶಿಲ ಮತ್ತು ಸೌತಡ್ಕ ಮಹಾಗಣಪತಿ ದೇವಸ್ಥಾನಕ್ಕೆ ಹಮ್ಮಿಕೊಳ್ಳಲಾಯಿತು. ಒಟ್ಟು 147 ಮಕ್ಕಳು ಹಾಗೂ 6 ಅಧ್ಯಾಪಕರು ಈ ಪ್ರವಾಸದಲ್ಲಿ ಭಾಗವಹಿಸಿದ್ದರು.




**4ನೇ ತರಗತಿ ಪ್ರವಾಸ 10.11.2022:** ಉಚ್ಚಿಲ ಮಹಾಲಕ್ಷ್ಮೀ ದೇವಸ್ಥಾನ, ಬಪ್ಪನಾಡು ಪರಮೇಶ್ವರಿ ದೇವಸ್ಥಾನ ಹಾಗೂ ಪಣಂಬೂರು ಕಡಲತೀರಕ್ಕೆ ಆಯೋಜಿಸಲಾಗಿತ್ತು. 168 ವಿದ್ಯಾರ್ಥಿಗಳು ಹಾಗೂ 8 ಅಧ್ಯಾಪಕರು ಈ ಪ್ರವಾಸದಲ್ಲಿ ಪಾಲ್ಗೊಂಡಿದ್ದರು.

**ಕನಕದಾಸ ಜಯಂತಿ : 11.11.2022**

**ಕನಕದಾಸ ಜಯಂತಿ ಕಾರ್ಯಕ್ರಮದಲ್ಲಿ ಅಧ್ಯಾಪಕರಾದ ಪ್ರತೀಕ್ಷಾ ಶೆಟ್ಟಿ ಕನಕದಾಸರ ಬಗ್ಗೆ ಮಾತನಾಡಿದರು. ವೇದಿಕೆಯಲ್ಲಿ ಶ್ರೀಮತಿ ರೂಪಕಲಾ ಎಂ., ಮತ್ತು ಶ್ರೀಮತಿ ದೇವಿಕಾ ಪಿ ಶೆಟ್ಟಿ ಉಪಸ್ಥಿತರಿದ್ದರು.**

### ರಾಜ್ಯಮಟ್ಟಕ್ಕೆ ಆಯ್ಕೆ 30.11.2022



ದ.ಕ ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಸಾಕ್ಷರತಾ ಇಲಾಖೆ, ಮಂಗಳೂರು, ಪ್ರಾಥಮಿಕ ವಿದ್ಯಾರ್ಥಿಗಳ ಜಿಲ್ಲಾ ಮಟ್ಟದ ಸ್ಕಿಪ್ಪಿಂಗ್ ಸ್ಪರ್ಧೆಯಲ್ಲಿ ಗುರುನಂದನ್ ರೈ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾನೆ.

### ರಾಜ್ಯ ಮಟ್ಟಕ್ಕೆ ಆಯ್ಕೆ 19.11.2022



ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನ ಶಿರಸಿ ಶ್ರೀಮದ್ಭಗವದ್ಗೀತಾ ಅಭಿಯಾನ ಸಮಿತಿ ದ.ಕ. ಇದರ ವತಿಯಿಂದ ಗೀತಾಜಯಂತಿಯ ಅಂಗವಾಗಿ ನಡೆದ ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆಯಲ್ಲಿ 7ನೇ ತರಗತಿಯ ರಮ್ಯಾ ಭಟ್ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾಳೆ

### ಜಿಲ್ಲಾ ಮಟ್ಟಕ್ಕೆ ಆಯ್ಕೆ :19.11.2022



ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಯೋಗ ಮತ್ತು ನೈತಿಕ ಶಿಕ್ಷಣ ಯೋಜನೆ, ಶಾಂತಿವನ ಟ್ರಸ್ಟ್(ರಿ) ಇದರ ವತಿಯಿಂದ ನಡೆದ ತಾಲೂಕು ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ 7ನೇ ತರಗತಿಯ ಶ್ರೀವತ್ಸ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾನೆ.

### ಬೌದ್ಧಿಕ ಸ್ಪರ್ಧೆಗಳು : 25 ಮತ್ತು 26



ದಿನಾಂಕ 25 ಮತ್ತು 26 ರಂದು ಬೌದ್ಧಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಬೆಂಕಿ ಇಲ್ಲದ ಅಡುಗೆ, ರಂಗೋಲಿ, ಛದ್ಮವೇಷ, ವಾಸನೆ ಗ್ರಹಿಸುವುದು, ಶಬ್ದ ಗ್ರಹಿಕೆ ಹಾಗೂ ರುಚಿ ಗ್ರಹಿಕೆ ಸೇರಿದಂತೆ ಹಲವಾರು ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

### ಕಲ್ಲಡ್ಕ ವಲಯ ಮಟ್ಟದ ಕ್ರೀಡಾಕೂಟ



ದಿನಾಂಕ 3/11/22 ರಂದು ನಡೆದ ಕಲ್ಲಡ್ಕ ವಲಯ ಮಟ್ಟದ ಕ್ರೀಡಾಕೂಟದ 17 ರ ವಯೋಮಾನದ ಬಾಲಕ-ಬಾಲಕಿಯರ ವಿಭಾಗದಲ್ಲಿ ಶ್ರೀರಾಮ ಪ್ರೌಢಶಾಲೆ 8 ಪ್ರಥಮ, 9 ದ್ವಿತೀಯ, 5 ತೃತೀಯ ಬಹುಮಾನವನ್ನು ಪಡೆದಿರುತ್ತದೆ.

### ಕಲ್ಲಡ್ಕ ವಲಯ ಮಟ್ಟದ ಕ್ರೀಡಾಕೂಟ



ದಿನಾಂಕ 3/11/22 ರಂದು ನಡೆದ ಕಲ್ಲಡ್ಕ ವಲಯ ಮಟ್ಟದ ಕ್ರೀಡಾಕೂಟದ 14 ರ ವಯೋಮಾನದ ಬಾಲಕ-ಬಾಲಕಿಯರ ವಿಭಾಗದಲ್ಲಿ ಶ್ರೀರಾಮ ಪ್ರೌಢಶಾಲೆ 1 ಪ್ರಥಮ, 1 ದ್ವಿತೀಯ, 2 ತೃತೀಯ ಬಹುಮಾನವನ್ನು ಪಡೆದಿರುತ್ತದೆ.

### ವಿದ್ಯಾಭಾರತಿ ಕ್ಷೇತ್ರೀಯ ಮಟ್ಟದ ವಾಲಿಬಾಲ್ ಪಂದ್ಯಾಟದಲ್ಲಿ ಪ್ರಥಮ 3/11/2022



ಕಲ್ಬುರ್ಗಿ ಜಿಲ್ಲೆಯಲ್ಲಿ ನಡೆದ **ಕ್ಷೇತ್ರೀಯ ಮಟ್ಟದ ವಾಲಿಬಾಲ್ ಪಂದ್ಯಾಟದಲ್ಲಿ** 10ನೇ ತರಗತಿಯ ಪೂರ್ಣೇಶ್ ಮತ್ತು ಸುಶಾಂತ್ ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರತಿನಿಧಿಸಿ ಪ್ರಥಮ ಸ್ಥಾನ ಪಡೆದು ಡಿಸೆಂಬರ್ ತಿಂಗಳಲ್ಲಿ ಉತ್ತರ ಪ್ರದೇಶದ ಮಥುರದಲ್ಲಿ ನಡೆಯುವ ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿರುತ್ತಾನೆ.

### ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಸಾಧನೆ. 8/11/22



ಸಾರ್ವಜನಿಕ ಇಲಾಖೆ ನಡೆಸಿದ ಅಥ್ಲೆಟಿ-ಕ್ಸ್ ಸ್ಪರ್ಧೆಯಲ್ಲಿ 17ರ ವಯೋಮಾನದ ಬಾಲಕರ ವಿಭಾಗದಲ್ಲಿ ಲಕ್ಷೀಶ(10 ಭಾರ್ಗವ)100ಮೀ ಓಟ ಪ್ರಥಮ, ಚಿಂತನ್(10ನೇ ದುರ್ಗಾವತಿ) ಅಡೆತಡೆ ಓಟ ದ್ವಿತೀಯ, ಶ್ರೀಶಾಂತ್(9ನೇ ಓಬವ್ವ) ಉದ್ದ ಜಿಗಿತ ದ್ವಿತೀಯ, 4*100ಮೀ ರಿಲೇ-(ಶ್ರೇಯಸ್, ಲಕ್ಷೀಶ, ಸುಶಾಂತ್, ಚಿಂತನ್)ಪ್ರಥಮ ಪ್ರಶಸ್ತಿಗಳನ್ನು ಪಡೆದುಕೊಂಡಿ-ದ್ದಾರೆ. 17 ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ 400 ಮೀ ಓಟದಲ್ಲಿ ಧನ್ಯಶ್ರೀ (10ನೇ ಭಾರ್ಗವ)ತೃತೀಯ ಪ್ರಶಸ್ತಿ 200ಮೀ ತೃತೀಯ, ದೀಕ್ಷಾ(9ನೇ ದೇವಶಿಲ್ಪಿ)ತ್ರಿವಿಧ ಜಿಗಿತ-ತೃತೀಯ ಪ್ರಶಸ್ತಿಯನ್ನು ಪಡೆದಿರುತ್ತಾರೆ.

### ಪಾಕಶಾಲೆಗೆ ಅಕ್ಕಿ ನೀಡಿದ ಪ್ರೌಢಶಾಲೆಯ ವಿದ್ಯಾರ್ಥಿಗಳು 4.11.2022

ಅನ್ನದಾನದ ಬಾಬ್ತು ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳು (ನವೆಂಬರ್ ತಿಂಗಳಿನಲ್ಲಿ) ಪಾಕಶಾಲೆ "ಸೀತಾರಸೋಯಿ"ಗೆ 56 ಕೆ.ಜಿ ಅಕ್ಕಿಯನ್ನು ನೀಡಿದರು.

### ತಾಲೂಕು ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಪ್ರೌಢಶಾಲೆ ಮಕ್ಕಳ ಸಾಧನೆ 3.11.22

ತಾಲೂಕು ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ನಡೆದ ಸ್ಪರ್ಧೆಗಳ ಪೈಕಿ ರಸಪ್ರಶ್ನೆಯಲ್ಲಿ ಭೂಷಣ್ ಮತ್ತು ಉದಯ್ ಕೃಷ್ಣ ಪ್ರಥಮ ಸ್ಥಾನ, ಚರ್ಚಾಸ್ಪರ್ಧೆಯಲ್ಲಿ ಭೂಷಣ್ ಪ್ರಥಮ ಸ್ಥಾನ, ಸಂಸ್ಕೃತ ಧಾರ್ಮಿಕ ಪಠಣದಲ್ಲಿ ಅಕ್ಷತಲಕ್ಷ್ಮೀ ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ.

### ನಿಟಿಲಾಕ್ಷನ ಸನ್ನಿಧಿಯಲ್ಲಿ ಶ್ರೀರಾಮ ಪ್ರೌಢಶಾಲೆಯ ವಿದ್ಯಾರ್ಥಿಗಳು 7.11.22

ದಿನಾಂಕ 7.11.22 ರಂದು ಶ್ರೀ ನಿಟಿಲಾಕ್ಷ ಸದಾಶಿವ ದೇವಸ್ಥಾನದಲ್ಲಿ ಜರಗಿದ ಭಜನಾ ಕಾರ್ಯಕ್ರಮದಲ್ಲಿ ಶ್ರೀ ರಾಮ ಪ್ರೌಢಶಾಲಾ ವಿದ್ಯಾರ್ಥಿಗಳು ಭಾಗವಹಿಸಿದರು.

### ರಾಷ್ಟ್ರೀಯ ಮತದಾನ ದಿನಾಚರಣೆ ಪ್ರಯುಕ್ತ ನಡೆದ ಸ್ಪರ್ಧೆಯಲ್ಲಿ ಭಾಗಿ 4.11.2022

ದಿನಾಂಕ 4.11.2022 ರಾಷ್ಟ್ರೀಯ ಮತದಾನ ದಿನಾಚರಣೆ-ಯ ಪ್ರಯುಕ್ತ ನಡೆದ ರಸಪ್ರಶ್ನೆ ಸ್ಪರ್ಧೆಯಲ್ಲಿ ಭೂಷಣ್ ಮತ್ತು ಉದಯ ಕೃಷ್ಣ ಚತುರ್ಥ ಬಹುಮಾವನ್ನು ಪಡೆದಿರುತ್ತಾರೆ.

### ಕನಕದಾಸ ಜಯಂತಿ ಆಚರಣೆ 11.11.22

ಮುಖ್ಯ ಅತಿಥಿಗಳಾಗಿ ಶ್ರೀರಾಮ ಪ್ರಾಥಮಿಕ ಶಾಲೆಯ ಶ್ರೀ ಸುಮಂತ್ ಶ್ರೀಮಾನ್ ಇವರು ಆಗಮಿಸಿದರು. ವೇದಿಕೆಯಲ್ಲಿ ಶ್ರೀರಾಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಗೋಪಾಲ್ ಶ್ರೀಮಾನ್ ಇವರು ಉಪಸ್ಥಿತರಿದ್ದರು.

**ಕನ್ನಡ ಹಬ್ಬ – ಗೌರವದ ಕಾಣಿಕೆ. 19/11/22**




ದಿನಾಂಕ 19/11/22 ರಂದು ಸಂಘನಿಕೇತನ ಮಂಗಳೂರು ಇಲ್ಲಿ ನಡೆದ ಕನ್ನಡ ಹಬ್ಬ ಕಾರ್ಯಕ್ರಮದಲ್ಲಿ ಶ್ರೀರಾಮ ವಿದ್ಯಾ- ಕೇಂದ್ರದ ವಿದ್ಯಾರ್ಥಿಗಳು ನೀಡಿದ ಕಾರ್ಯಕ್ರಮದ ಸವಿನೆನಪಿಗಾಗಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ನೆನಪಿನ ಕಾಣಿಕೆ ಸ್ವೀಕರಿಸಿದರು.

**ವಾರ್ಷಿಕ ಕ್ರೀಡಾಕೂಟ 11.11.22**




ವಾರ್ಷಿಕ ಕ್ರೀಡಾಕೂಟವನ್ನು ಗೋಳ್ತಮಜಲು ಗ್ರಾಮ ಪಂಚಾಯತಿ ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮಿ. ವಿ. ಪ್ರಭು ಇವರು ಉದ್ಘಾಟಿಸಿದರು. ವೇದಿಕೆಯಲ್ಲಿ ಶ್ರೀ ರಮೇಶ್ ಎನ್., ಶ್ರೀಮತಿ ಶಾಂಭವಿ ಮಾತಾಜಿ, ಶ್ರೀ ಗೋಪಾಲ್ ಎಂ. ಉಪಸ್ಥಿತರಿದ್ದರು.

**'ಕನಸುಗಳು' 2022ರಲ್ಲಿ ಭಾಗಿ 11.11.22**




ವಿವೇಕಾನಂದ ಪದವಿ ಪೂರ್ವ ಕಾಲೇಜು ಪುತ್ತೂರು ಇಲ್ಲಿ ನಡೆದ ಕನಸುಗಳು-2022 ಕಾರ್ಯಕ್ರಮದಲ್ಲಿ ಯುವ ಪತ್ರಕರ್ತ ಸ್ಪರ್ಧೆಯಲ್ಲಿ ದೀಕ್ಷಿತ್ ಪ್ರಥಮ ಸ್ಥಾನವನ್ನು , ಯುವ ವಾಣಿಜ್ಯೋದ್ಯಮ ಸ್ಪರ್ಧೆಯಲ್ಲಿ ಅಕ್ಷತಾ ಲಕ್ಷ್ಮೀ ಮತ್ತು ಅನನ್ಯ ಶೆಟ್ಟಿ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾರೆ.

**ದಿನಾಂಕ 19.11.22 ರಂದು ಶ್ರೀಮದ್ಭಗವದ್ಗೀತೆಯ ಅಭಿಯಾನ ಸಮಿತಿ ದಕ್ಷಿಣ ಕನ್ನಡ ವತಿಯಿಂದ ಕಟೀಲು ದುರ್ಗಾಪರಮೇಶ್ವರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಗೀತಾರಸಪ್ರಶ್ನೆ ಸ್ಪರ್ಧೆಯಲ್ಲಿ 9ನೆ ಭಾಸ್ಕರ ತರಗತಿಯ ಗೌತಮ ಭಾರದ್ವಾಜ ತೃತೀಯ ಸ್ಥಾನ ಪಡೆದಿರುತ್ತಾನೆ.**

**ರಂಗೋಲಿ, ಬೆಂಕಿಯಿಲ್ಲದ ಅಡುಗೆ ಸ್ಪರ್ಧೆ. 24.11.22**



ಪ್ರತಿಭಾ ದಿನೋತ್ಸವದ ಪ್ರಯುಕ್ತ ನಡೆದ ಬೆಂಕಿಯಿಲ್ಲದ ಅಡುಗೆ ಹಾಗೂ ವಿವಿಧ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಉತ್ಸುಕತೆಯಿಂದ ಪಾಲ್ಗೊಂಡರು.

**ಹುಟುಹಬ್ಬ, ಭಜನೆ, ಸಂವಿಧಾನ ದಿನಾಚರಣೆ. 26.11.22**




ಸಾಮೂಹಿಕ ಹುಟ್ಟುಹಬ್ಬ, ಭಜನಾ ಕಾರ್ಯಕ್ರಮ ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲೆಯ ಪ್ರೀತ ಮಾತಾಜಿ ದಿನದ ಮಹತ್ವ ತಿಳಿಸಿಕೊಟ್ಟರು. ಸಂವಿಧಾನ ದಿನದ ಮಹತ್ವವನ್ನು ನ್ಯಾಯವಾದಿ ಶ್ರೀ ಸತೀಶ್ ಭಟ್ ಶಿವಗಿರಿ ಇವರು ತಿಳಿಸಿಕೊಟ್ಟರು. ವೇದಿಕೆಯಲ್ಲಿ ಶ್ರೀ ರಮೇಶ್ ಶ್ರೀಮಾನ್, ಶ್ರೀಮತಿ ಶಾಂಭವಿ ಹಿರಿಯ ವಿದ್ಯಾರ್ಥಿ ಶ್ರೀ ದಯಾನಂದ, ವಿವೇಕಾನಂದ ಬಿ.ಎಡ್.ಕಾಲೇಜು ಉಪನ್ಯಾಸಕರಾದ ಶ್ರೀಮತಿ ರಾಜೀವಿ ಮಾತಾಜಿ, ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್.ಎಂ ಉಪಸ್ಥಿತರಿದ್ದರು. .

## ಸೆಕೆಂಡರಿ ಸ್ಕೂಲ್

**ವಾರ್ಷಿಕ ಕ್ರೀಡಾಕೂಟ 14.11.2022**

**ಶ್ರೀರಾಮ ಸೆಕೆಂಡರಿ ಸ್ಕೂಲ್‌ನ ವಾರ್ಷಿಕ ಕ್ರೀಡಾಕೂಟದಲ್ಲಿ ಎಲ್ಲಾ ವಿದ್ಯಾರ್ಥಿಗಳ ಜೊತೆಗೆ ಮಾತಾಜಿ ಶ್ರೀಮಾನ್ ರವರು ಭಾಗಿಯಾಗಿದ್ದರು. ದೈಹಿಕ ಶಿಕ್ಷಣ ಶಿಕ್ಷಕರಾದಂತಹ ರಾಜೇಶ್ ಶ್ರೀಮಾನ್ ಕ್ರೀಡಾಕೂಟದ ಮುಂದಾಳತ್ವ ವಹಿಸಿದ್ದರು.**

**ರಂಗೋಲಿ ಸ್ಪರ್ಧೆ 21.11.2022**

**ದಿನಾಂಕ 20.11.2022 ರಂದು ಶ್ರೀರಾಮ ಸೆಕೆಂಡರಿ ಸ್ಕೂಲ್ ನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ಕುರಿತಾಗಿ ನಡೆದ ರಂಗೋಲಿ ಸ್ಪರ್ಧೆಯಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.**

**ರಾಷ್ಟ್ರೀಯ ಚೆಸ್ ಪಂದ್ಯಾಟಕ್ಕೆ ಆಯ್ಕೆ 02.11.22**




ಅಮೃತ ಭಾರತಿ ವಿದ್ಯಾಲಯ ಹೆಬ್ರಿ ಉಡುಪಿ ಜಿಲ್ಲೆ, ಇಲ್ಲಿ ನಡೆದ ವಿದ್ಯಾಭಾರತಿ ಪ್ರಾಂತೀಯ ಹಾಗೂ ಕ್ಷೇತ್ರಿಯ ಮಟ್ಟದ ಚೆಸ್ ಸ್ಪರ್ಧೆಯಲ್ಲಿ ದ್ವಿತೀಯ ವಿಜ್ಞಾನ ವಿಭಾಗದ ಭೂಮಿಕ ಹಾಗೂ ಪ್ರಥಮ ವಿಜ್ಞಾನ ವಿಭಾಗದ ಅನ್ವಿತ ಇವರು ಪ್ರಥಮ ಸ್ಥಾನ ಗಳಿಸಿ ಅಸ್ಸಾಂನಲ್ಲಿ ನಡೆಯುವ ವಿದ್ಯಾಭಾರತಿ ರಾಷ್ಟ್ರೀಯ ಮಟ್ಟದ ಚೆಸ್ ಚಾಂಪಿಯನ್ಶಿಪ್‌ಗೆ ಆಯ್ಕೆಯಾಗಿರುತ್ತಾರೆ

**ಎ.ಬಿ.ವಿ.ಪಿ. ಸದಸ್ಯತ್ವ ಅಭಿಯಾನ 07.11.22**




ಪದವಿ ಪೂರ್ವ ವಿಭಾಗದಲ್ಲಿ ಎ.ಬಿ.ವಿ.ಪಿ. ಸಂಘಟನೆಯ ಸದಸ್ಯತ್ವ ಅಭಿಯಾನ ಕಾರ್ಯಕ್ರಮದಲ್ಲಿ ಮಂಗಳೂರು ವಿಭಾಗದ ಸಂಚಾಲಕ ಶ್ರೀ ಹರ್ಷಿತ್ ಇವರು ಸಂಘಟನೆಯ ಕಾರ್ಯವೈಖರಿ ಮತ್ತು ಸಂಘಟನೆ ಬೆಳೆದು ಬಂದ ಬಗೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಸಹ ಸಂಚಾಲಕರಾದ ಶ್ರೀ ದಿನೇಶ್ ಹಾಗೂ ಪ್ರಾಂಶುಪಾಲರಾದ ಶ್ರೀ ವಸಂತ್ ಬಲ್ಲಾಳ್ ಉಪಸ್ಥಿತರಿದ್ದರು.

**ಕನಕ ಜಯಂತಿ ಕಾರ್ಯಕ್ರಮ 11.11.22**



ಪದವಿಪೂರ್ವ ವಿಭಾಗದ ಕನಕ ಜಯಂತಿ ಕಾರ್ಯಕ್ರಮವನ್ನು ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಭೂಷಣ್ ದೀಪ ಬೆಳಗಿಸಿ, ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಚಾಲನೆ ನೀಡಿದರು. ಪ್ರಾಂಶುಪಾಲರು, ಉಪನ್ಯಾಸಕ - ಉಪನ್ಯಾಸಕೇತರರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

**ರಾಷ್ಟ್ರ ಮಟ್ಟದ ವಿದ್ಯಾಭಾರತಿ ಜ್ಞಾನ ವಿಜ್ಞಾನ ಸಂಸ್ಕೃತಿ ಮೇಳ** 11.11.22



ರಾಷ್ಟ್ರ ಮಟ್ಟದ ವಿದ್ಯಾಭಾರತಿ ಜ್ಞಾನ ವಿಜ್ಞಾನ ಸಂಸ್ಕೃತಿ ಮೇಳ ಪ್ರಯಾಗದಲ್ಲಿ ನಡೆದಿದ್ದು, ಸಂಸ್ಕೃತಿ ಜ್ಞಾನ ರಸಪ್ರಶ್ನೆ ಸ್ಪರ್ಧೆಯಲ್ಲಿ ಪದವಿ ಪೂರ್ವ ಕಾಲೇಜಿನ ದ್ವಿತೀಯ ವಿಜ್ಞಾನ ವಿಭಾಗದ ಕುಮಾರಿ ರಿದಿಶಾ, ಕುಮಾರಿ ಧನ್ಯಶ್ರೀ ಮತ್ತು ಕುಮಾರಿ ತೃಪ್ತಿ ಭಾಗವಹಿಸಿರುತ್ತಾರೆ.

**ಮಕ್ಕಳ ಜಗಲಿ ಎಳೆಯರ ಪ್ರತಿಭೆ** 14.11.22



ಮಕ್ಕಳ ಜಗಲಿ ಎಳೆಯರ ಪ್ರತಿಭೆ ಪತ್ರಿಕೆಯ ಎರಡನೇ ವರ್ಷದ ಪ್ರಯುಕ್ತ ಆಯೋಜಿಸಲಾದ ರಾಜ್ಯ ಮಟ್ಟದ ಕವನ ಹಾಗೂ ಕಥಾ ಸ್ಪರ್ಧೆಯಲ್ಲಿ ದ್ವಿತೀಯ ಪಿ. ಯು. ಸಿ. ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಕುಮಾರಿ ಶ್ರಾವ್ಯ ಇವಳು ರಚಿಸಿದ "ಪ್ರಕೃತಿಯ ಪಾಠ " ಎಂಬ ಕವನಕ್ಕೆ ಮೆಚ್ಚುಗೆ ಪ್ರಶಸ್ತಿ ಲಭಿಸಿದೆ.

**ಹಿತಚಿಂತನಾ ಅಭಿಯಾನ 16.11.22**




ವಿಶ್ವ ಹಿಂದೂ ಪರಿಷತ್ ಕರ್ನಾಟಕ ದಕ್ಷಿಣ ವಿಭಾಗ ಇದರ ವತಿಯಿಂದ ನಡೆದ ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಸಚಿನ್ ಮೆಲ್ಕಾರ್ ಅಧ್ಯಕ್ಷರು ವಿಶ್ವ ಹಿಂದೂ ಪರಿಷತ್ ಭಜರಂಗ ದಳ ಕಲ್ಲಡ್ಕ ಪ್ರಖಂಡ ಇವರು ಹಿತ ಚಿಂತನಾ ಅಭಿಯಾನದ ಮುಖ್ಯ ಉದ್ದೇಶ ಮತ್ತು ಕಾರ್ಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

**ಮಧು ಕಲಾ ಉತ್ಸವ** 18.11.22




ಸರೋಜಿನಿ ಮಧುಸೂಧನ ಕುಶೆ ಶಿಕ್ಷಣ ಸಂಸ್ಥೆ ಅತ್ತಾವರ ಇಲ್ಲಿ ಸರೋಜ್ ಮಧು ಕಲಾ ಉತ್ಸವ 2022 ರ ಪ್ರಯುಕ್ತ ಆಯೋಜಿಸಲಾಗಿದ್ದ ಭಾವಗೀತೆ ಸ್ಪರ್ಧೆಯಲ್ಲಿ ಪ್ರಥಮ ವಾಣಿಜ್ಯ ವಿಭಾಗದ ಲಿಖಿತ್ ತೃತೀಯ ಸ್ಥಾನ ಹಾಗೂ ಭಜನಾ ಸ್ಪರ್ಧೆಯಲ್ಲಿ ಮೇಘ ದ್ವಿತೀಯ ವಾಣಿಜ್ಯ ವಿಭಾಗ ಮತ್ತು ತಂಡ ತೃತೀಯ ಸ್ಥಾನವನ್ನು ಪಡೆದಿರುತ್ತಾರೆ.

**ರಾಷ್ಟ್ರೀಯ ಮಟ್ಟದ ಖೋ ಖೋ** 18.11.22



ವಿದ್ಯಾಭಾರತಿ ಆಶ್ರಯದಲ್ಲಿ ಮಧ್ಯಪ್ರದೇಶದಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಖೋ ಖೋ ಪಂದ್ಯಾಟದಲ್ಲಿ ದ್ವಿತೀಯ ವಾಣಿಜ್ಯ ವಿಭಾಗದ ಶ್ರೀನಿಶ್ ಮತ್ತು ಪವನ್ ಇವರುಗಳು ಭಾಗವಹಿಸಿ ಪ್ರಥಮ ಸ್ಥಾನ ಪಡೆದಿರುತ್ತಾರೆ.

**ಮಾತೃ ಭಾರತಿ ಸಮಿತಿ ಮತ್ತು ಅಭಿವೃದ್ಧಿ ಮಂಡಳಿ ಸಮಿತಿ** 22.11.22



ಮಾತೃ ಭಾರತಿ ಸಮಿತಿ ವತಿಯಿಂದ ನಡೆದ ವಿಶೇಷ ಬೈಠಕ್‌ನಲ್ಲಿ ಸಂಚಾಲಕರಾದ ಶ್ರೀ ವಸಂತ ಮಾಧವ ಶ್ರೀಮಾನ್ ಇವರು ಮಾತೃ ಮಂಡಳಿ ಸಮಿತಿಯ ರಚನೆ ಮತ್ತು ಉದ್ದೇಶಗಳ ಕುರಿತು ಮಾಹಿತಿ ನೀಡಿದರು. ಶ್ರೀ ವಸಂತ ಬಲ್ಲಾಳ್ ಇವರು ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಮಾತೃ ಮಂಡಳಿಗೆ ಅಧ್ಯಕ್ಷರನ್ನಾಗಿ ಶ್ರೀಮತಿ ಬೇಬಿ ಮತ್ತು ಮತ್ತು ಕಾರ್ಯದರ್ಶಿ ಗಳಾಗಿ ಶ್ರೀಮತಿ ಶ್ವೇತಾ ಕಾಮತ್ ಇವರುಗಳನ್ನು ಆಯ್ಕೆ ಮಾಡಲಾಯಿತು. ಈ ಕಾರ್ಯಕ್ರಮದ ನಿರ್ವಹಣೆಯನ್ನು ಜೀವಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಶೈಲಿನಿ ಮಾತಾಜಿ ಇವರು ನಿರ್ವಹಿಸಿದರು.

**ಅಭಿವೃದ್ಧಿ ಸಮಿತಿ ಸಭೆ 22.11.22:**

ಅಭಿವೃದ್ಧಿ ಮಂಡಳಿ ಸಮಿತಿ ವತಿಯಿಂದ ವಿಶೇಷ ಬೈಠಕ್ ನಡೆದಿದ್ದು, ಶ್ರೀ ವಸಂತ ಮಾಧವ ಇವರು ಸಮಿತಿಯ ರಚನೆ ಮತ್ತು ಕಾರ್ಯಗಳ ಕುರಿತು ಮಾಹಿತಿ ನೀಡಿದರು. ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ಇವರು ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಅಭಿವೃದ್ಧಿ ಮಂಡಳಿಗೆ ಅಧ್ಯಕ್ಷರನ್ನಾಗಿ ಶ್ರೀ ಪುರುಷೋತ್ತಮ ನೆತ್ರಕೆರೆ ಮತ್ತು ಕಾರ್ಯದರ್ಶಿಯಾಗಿ ಶ್ರೀಮತಿ ಪ್ರಮೀಳಾ ಮಂಚಿ ಇವರನ್ನು ಆಯ್ಕೆ ಮಾಡಲಾಯಿತು.

**'ಕನ್ನಡ ನಮಗೆಷ್ಟು ಗೊತ್ತು'** 23/11/22



ಭವಿಷ್ ಘಟಕದ ವತಿಯಿಂದ ವಿದ್ಯಾರ್ಥಿಗಳಿಗೆ 'ಕನ್ನಡ ನಮಗೆಷ್ಟು ಗೊತ್ತು 'ಎಂಬ ವಿಷಯದ ಬಗ್ಗೆ ಶ್ರೀ ನಾರಾಯಣ ಗೌಡ ನಿವೃತ್ತ ಶಿಕ್ಷಕರು ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾರ್ಗದರ್ಶನ ನೀಡಿದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ಇವರು ಉಪಸ್ಥಿತರಿದ್ದರು..

**C. E T. ಮಾಹಿತಿ ಕಾರ್ಯಾಗಾರ** 24.11.22



ಭಾಸ್ಕರಚಾರ್ಯ ವಿಜ್ಞಾನ ಸಂಘದ ವತಿಯಿಂದ C. E T. ಮಾಹಿತಿ ಕಾರ್ಯಾಗಾರ ನಡೆಯಿತು. ಈ ಕಾರ್ಯಕ್ರಮದಲ್ಲಿ ಕಲಿಕಾ ಅಕಾಡೆಮಿ ಸ್ಥಾಪಕರು ಮತ್ತು ಸಂಕಲ್ಪದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾದ ಶ್ರೀ ಪ್ರಸನ್ನ ಕಾರ್ತಿಕೇಯ ಎಸ್. ಇವರು ಸಂಪನ್ಮೂಲ ಅತಿಥಿಗಳಾಗಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಜೀವಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಶೈಲಿನಿ ಇವರು ವಹಿಸಿದ್ದರು.

**ಸಾಮೂಹಿಕ ಹುಟ್ಟುಹಬ್ಬ ಆಚರಣೆ** 26.11.22



ಸಾಮೂಹಿಕ ಹುಟ್ಟುಹಬ್ಬ ಆಚರಣೆ ಮತ್ತು ಭಜನಾ ಕಾರ್ಯಕ್ರಮವು ನಡೆಯಿತು. ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ವಿದ್ಯಾರ್ಥಿಗಳು ಪುಷ್ಪಾರ್ಚನೆ ಮತ್ತು ನಿಧಿ ಸಮರ್ಪಣೆ ಮಾಡಿ ಮಾತಾಜಿಗಳಿಂದ ತಿಲಕ ಧಾರಣೆ ಮತ್ತು ಆರತಿ ಬೆಳಗಿಸಿಕೊಂಡು ಆಶೀರ್ವಾದ ಪಡೆದರು.

**ಸಂವಿಧಾನ ದಿನ** 26.11.22



ಪದವಿ ಪೂರ್ವ ವಿಭಾಗದಲ್ಲಿ ಸಂವಿಧಾನ ದಿನವನ್ನು ಆಚರಿಸಲಾಯಿತು. ಇತಿಹಾಸ ಉಪನ್ಯಾಸಕರಾದ ಶ್ರೀ ರಮೇಶ್ ಶ್ರೀಮಾನ್ ಇವರು ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿಯನ್ನು ಬೋಧಿಸಿ ಸಂವಿಧಾನ ದಿನದ ಮಹತ್ವದ ಕುರಿತು ಮಾಹಿತಿ ನೀಡಿದರು.

**ರಾಷ್ಟ್ರೀಯ ಚೆಸ್ ಪಂದ್ಯಾಟಕ್ಕೆ ಆಯ್ಕೆ**



ಅಸ್ಸಾಂ ರಾಜ್ಯದ ಗೌಹಾಟಿಯಲ್ಲಿ ನಡೆಯುವ 33ನೇ ವಿದ್ಯಾಭಾರತಿ ರಾಷ್ಟ್ರೀಯ ಮಟ್ಟದ ಚೆಸ್ ಚಾಂಪಿಯನ್ಶಿಪ್ಗೆ ಆಯ್ಕೆಯಾದ ಶ್ರೀರಾಮ ಪದವಿಪೂರ್ವ ದ್ವಿತೀಯ ವಿಜ್ಞಾನ ವಿಭಾಗದ ಭೂಮಿಕ ಮತ್ತು ಪ್ರಥಮ ವಿಜ್ಞಾನ ವಿಭಾಗದ ಕು. ಅನ್ವಿತ.

## ಪದವಿ

**ಯಕ್ಷಾಮೃತ ಯಕ್ಷಗಾನ ತರಬೇತಿ** 09.11.2022



ಪದವಿ ಮಹಾವಿದ್ಯಾಲಯದ ಯಕ್ಷಗಾನ ತರಬೇತಿ ಕೇಂದ್ರ "ಯಕ್ಷಾಮೃತ"ವನ್ನು ಡಾ ಪ್ರಭಾಕರ ಭಟ್ ಕಲ್ಲಡ್ಕ ಇವರು ಉದ್ಘಾಟಿಸಿದರು. 25 ವಿದ್ಯಾರ್ಥಿಗಳು ಭಾಗವಹಿಸಿದ ಈ ತರಬೇತಿಯನ್ನು ಶ್ರೀ ಮೋಹನ್ ಕುಮಾರ್ ಅಮ್ಮುಂಜೆಯವರು ನಡೆಸಿಕೊಟ್ಟರು.

**ಪ್ರಣವ ವಿದ್ಯಾರ್ಥಿ ಸಂಘ ಹಾಗೂ ವಿವಿಧ ಸಂಘಗಳ ಉದ್ಘಾಟನಾ ಸಮಾರಂಭ 18.11.2022**



ಪ್ರಣವ ವಿದ್ಯಾರ್ಥಿ ಸಂಘ ಹಾಗೂ 12 ಸಂಘಗಳ (ಪ್ರತಾಪ ಕ್ರೀಡಾ ಸಂಘ, ಪ್ರಬೋಧ ವಾಣಿಜ್ಯ ಸಂಘ, ಪ್ರಭವ ವಿಜ್ಞಾನ ಸಂಘ, ರಾಷ್ಟ್ರೀಯ ಸೇವಾ ಯೋಜನೆ, ಪ್ರದೀಪ್ತ ಸಾಂಸ್ಕೃತಿಕ ಸಂಘ, ಪ್ರಜ್ಞಾನ ಸಾಹಿತ್ಯ ಸಂಘ, ಪ್ರಭಾಸ ಮಾನವಿಕ ಸಂಘ ಇತ್ಯಾದಿ.) ಉದ್ಘಾಟನಾ ಸಮಾರಂಭ ನಡೆಯಿತು. ಡಾ. ಪ್ರಭಾಕರ ಭಟ್ ಕಲ್ಲಡ್ಕ ಇವರು ದೀಪ ಪ್ರಜ್ವಲನ ಹಾಗೂ ಪರದೆ ಸರಿಸುವ ಮೂಲಕ ಸಂಘಗಳನ್ನು ಉದ್ಘಾಟಿಸಿದರು. ಅತಿಥಿಗಳಾಗಿ ಶ್ರೀಮತಿ ಸುಲೋಚನಾ ಜಿ ಕೆ ಭಟ್ (ನಗರ ನೀರು ಸರಬರಾಜು & ಒಳ ಚರಂಡಿ ಮಂಡಳಿ, ರಾಜ್ಯ ನಿರ್ದೇಶಕರು), ಶ್ರೀ ದಿನೇಶ್ ಅಮ್ಟೂರು (ಭಾ.ಜ.ಪಾ ಎಸ್. ಸಿ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯರು), ಶ್ರೀ ಗೋಪಾಲ ಶೆಣೈ ಕಂಚಿನ ( ಆಡಳಿತ ಮಂಡಳಿ ಸದಸ್ಯರ, ಶ್ರೀ ರಾಮ ವಿದ್ಯಾಕೇಂದ್ರ ಕಲ್ಲಡ್ಕ) ಶೀ ನಾರಾಯಣ ಶೆಟ್ಟಿ ಕುಲ್ಯಾರು (ಅಧ್ಯಕ್ಷರು, ಶ್ರೀ ರಾಮ ಸೌಹಾರ್ದ ಸಹಕಾರಿ ನಿ.) ಹಾಗೂ ಶ್ರೀ ರಾಮ ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಮಹಾವಿದ್ಯಾಲಯದ ಬೋಧಕ– ಬೋಧಕೇತರ ವೃಂದದವರು ಹಾಗೂ ಶ್ರೀಮತಿ ಲಕ್ಷ್ಮೀ ರಘುರಾಜ್ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**ನಲಂದಾ ಕಾಲೇಜು ಪೆರ್ಲ– ರಾಷ್ಟ್ರ ಮಟ್ಟದ ಸೆಮಿನಾರ್ 19/11/2022:**




ತೃತೀಯ ವಾಣಿಜ್ಯ ವಿಭಾಗದ ಶಿವನಿವಾಸ್, ಕೀರ್ತಿ, ಯಕ್ಷಿತ್, ವಂದನಾ, ಸುಷ್ಮಾ, ಪಂಚಮಿ, ಧನ್ಯ ಶ್ರೀ, ಕವಿತಾ, ನವಿತಾ, ಲಿತಿನ್ ರಾಜ್ ಹಾಗೂ ದ್ವಿತೀಯ ವಾಣಿಜ್ಯ ವಿಭಾಗದ ಸಂಪತ್ ಇವರು ನಲಂದಾ ಕಾಲೇಜು, ಪೆರ್ಲದಲ್ಲಿ ನಡೆದ ರಾಷ್ಟ್ರ ಮಟ್ಟದ ಸೆಮಿನಾರ್‌ನಲ್ಲಿ ಭಾಗವಹಿಸಿ " Entrepreneurship and Economics Development in context of startup" ಎಂಬ ವಿಷಯದ ಕುರಿತು ಮಂಡಿಸಿದರು.

**ವಿದ್ಯಾರ್ಥಿ ಸಂಘದ ಚುನಾವಣೆ** 12.11.2022:



2022– 23ನೇ ಸಾಲಿನ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳ ಆಯ್ಕೆಯ ಕಾರ್ಯಕ್ರಮವ ನಡೆಯಿತು. ವಾಣಿಜ್ಯ ವಿಭಾಗದ ಚೇತನ್ ಅವರು 3005 ಅಂಕಗಳನ್ನು ಪಡೆದು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಗೊಂಡಿದ್ದಾರೆ. ಅಂತಿಮ ವಾಣಿಜ್ಯದ ಶಿವ ನಿವಾಸ್ ಅವರು 174 ಮತಗಳನ್ನು ಪಡೆದು ಕಾರ್ಯದರ್ಶಿ ಸ್ಥಾನಕ್ಕೆ, ದ್ವಿತೀಯ ಬಿ ಸಿ ಎ ವಿದ್ಯಾರ್ಥಿ ಅವಿನಾಶ್ ಅವರು ಅವಿರೋಧವಾಗಿ ಪುರುಷರ ವಿಭಾಗದ ಸಹ ಕಾರ್ಯದರ್ಶಿ ಸ್ಥಾನಕ್ಕೆ ಆಯ್ಕೆಯಾಗಿರುತ್ತಾರೆ.

**ಪ್ರಶಿಕ್ಷಣ ವರ್ಗ** 24.11.2022:

ಮಂಗಳೂರಿನ SDM College of Business Management ಇಲ್ಲಿ ನಡೆದ "One day workshop on English Syllabus, NEP 2020" ಪ್ರಶಿಕ್ಷಣ ವರ್ಗದಲ್ಲಿ ಶ್ರೀರಾಮ ಪದವಿ ಕಾಲೇಜಿನ ಆಂಗ್ಲಭಾಷಾ ಉಪನ್ಯಾಸಕಿಯರಾದ ಶ್ರೀಮತಿ ಶ್ರೀದೇವಿ ಹಾಗೂ ಶ್ರೀಮತಿ ಪ್ರಸನ್ನಾ ಇವರು ಭಾಗವಹಿಸಿರುತ್ತಾರೆ.

# ಪ್ರಾಥಮಿಕ ಶಾಲೆ



**2ನೇ ತರಗತಿ ಪ್ರವಾಸ 11.11.2022 :** ಈ ವರ್ಷದ ಶೈಕ್ಷಣಿಕ ಪ್ರವಾಸವನ್ನು ತಾರಾಲಯ, ಕುಡುಪು ಅನಂತ ಪದ್ಮನಾಭ ದೇವಾಲಯ, ಪಣಂಬೂರು ಬೀಚ್ ಮತ್ತು ಪಿಲಿಕುಳಕ್ಕೆ ಆಯೋಜಿಸಲಾಗಿತ್ತು. ಒಟ್ಟು 163 ವಿದ್ಯಾರ್ಥಿಗಳು ಮತ್ತು 7 ಅಧ್ಯಾಪಕರು ಭಾಗವಹಿಸಿದ್ದರು.



**ಕನ್ನಡ ಶಾಲೆಗಳ ಸನ್ಮಾನ : 13.11.2022**

ರಾಜ್ಯಮಟ್ಟದ ಕನ್ನಡ ಶಾಲೆಗಳ ಸನ್ಮಾನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

**ವಾರ್ಷಿಕ ಕ್ರೀಡಾಕೂಟ : 15 ಮತ್ತು 16**



ವಾರ್ಷಿಕ ಕ್ರೀಡಾಕೂಟಕ್ಕೆ ಮುಖ್ಯೋಪಾಧ್ಯಾಯರು ಚಾಲನೆ ನೀಡಿದರು. ಓಟ, ಗುಂಡೆಸತ, ಎತ್ತರ ಜಿಗಿತ, ಕಬಡ್ಡಿ ಮತ್ತು ಹಗ್ಗಜಗ್ಗಾಟ ಸೇರಿದಂತೆ ಹಲವಾರು ಹೊರಾಂಗಣ ಆಟ ಹಾಗೂ ಲಿಂಬೆ ಚಮಚ, ಬಲೂನ್ ಒಡೆ, ಡೊಂಕಾಟ ಮುಂತಾದ ಒಳಾಂಗಣ ಆಟವನ್ನು ಆಡಿಸಲಾಯಿತು.

**ಕನ್ನಡ ಶಾಲಾ ಮಕ್ಕಳ ಹಬ್ಬದಲ್ಲಿ ಭಾಗಿ :**



ಸಂಘನಿಕೇತನ ಮಂಗಳೂರು ಇಲ್ಲಿ ನಡೆದ ಕನ್ನಡ ಶಾಲಾ ಮಕ್ಕಳ ಹಬ್ಬದಲ್ಲಿ ಸಂಘಟಕರು ಹಾಗೂ ಕರ್ನಾಟಕ ರಾಜ್ಯ ಸರಕಾರದ ಮಾನ್ಯ ಶಿಕ್ಷಣ ಸಚಿವರೊಂದಿಗೆ ಶ್ರೀರಾಮ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳು.



**ಕೋಸಂಬರಿ ತಯಾರಿ : 17.11.2022**

3ನೇ ತರಗತಿಯ ಪಠ್ಯಾಧಾರಿತ ಚಟುವಟಿಕೆಯಾದ ಕೋಸಂಬರಿ ತಯಾರಿಕಾ ಪ್ರಾತ್ಯಕ್ಷಿಕೆಯಲ್ಲಿ ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ ಲಕ್ಷ್ಮೀ ರಘುರಾಜ್, ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

# ಸೆಕೆಂಡರಿ ಸ್ಕೂಲ್



**ಭಗವದ್ಗೀತಾ ಕಂಠಪಾಠ ಸ್ಪರ್ಧೆ. 19.11.22**

ಜಿಲ್ಲಾಮಟ್ಟದ ಭಗವದ್ಗೀತಾ ಕಂಠಪಾಠ ಸ್ಪರ್ಧೆಯಲ್ಲಿ ಶ್ರೀರಾಮ ಸೆಕೆಂಡರಿ ಸ್ಕೂಲ್ ನ ವಿದ್ಯಾರ್ಥಿನಿಯಾದ ವಾಸವಿ ಕೆ.ಸಿ ಇವಳು ದ್ವಿತೀಯ ಸ್ಥಾನವನ್ನು ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾಳೆ.





**ಕಲಿಕಾಪೂರಕ ಚಟುವಟಿಕೆ 17.11.2022 :** ಶ್ರೀರಾಮ ಸೆಕೆಂಡರಿ ಸ್ಕೂಲ್‌ನ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಕಲಿಕೆಗೆ ಪೂರಕವಾಗಿರುವ ಚಟುವಟಿಕೆ ಆಧಾರಿತ ಕಾರ್ಯಕ್ರಮದಲ್ಲಿ ತಾಲೂಕು ನ್ಯಾಯಾಲಯ ಮತ್ತು ಬಂಟ್ವಾಳ ಪೋಲೀಸ್ ಠಾಣೆಗೆ ಭೇಟಿ ನೀಡಿ, ಅಲ್ಲಿನ ಕಾರ್ಯ ವಿಧಾನಗಳು, ಪದ್ಧತಿಗಳನ್ನು ಪ್ರತ್ಯಕ್ಷವಾಗಿ ತಿಳಿದರು. ಶ್ರೀ ಶಿವಗಿರಿ ಸತೀಶ ನ್ಯಾಯವಾದಿಗಳು ಜೊತೆಗಿದ್ದರು.



**ಮೆಹಂದಿ–ಮುಖ ವರ್ಣಕಲೆ ಸ್ಪರ್ಧೆ 23.11.22**

ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ನಡೆದ ಮೆಹಂದಿ ಮತ್ತು ಮುಖ ವರ್ಣಕಲೆ ಜೊತೆಗೆ ಕೆಲವು ಸ್ಪರ್ಧೆಗಳು ನಡೆಯಿತು. ವಿದ್ಯಾರ್ಥಿ–ವಿದ್ಯಾರ್ಥಿನಿಯರು ಭಾಗವಹಿಸಿದರು.




**ಬಹುಮಾನ ವಿತರಣೆ. 14.11.2022**

ಪ್ರತಿಭಾ ದಿನೋತ್ಸವದ ಅಂಗವಾಗಿ ವಿಜೇತರಾದವರಿಗೆ ಬಹುಮಾನವನ್ನು ನೀಡುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸಂಸ್ಥೆಯ ಹಿರಿಯರು ಹಾಗೂ ಉಪಪ್ರಾಚಾರ್ಯರು ಉಪಸ್ಥಿತರಿದ್ದರು.



**ಒಡ್ಡೂರು ಫಾರ್ಮ್ ಭೇಟಿ 22.11.2022**

ಕೃಷಿ ಚಟುವಟಿಕೆ ವೀಕ್ಷಣೆಗಾಗಿ ಶ್ರೀರಾಮ ಸೆಕೆಂಡರಿ ಸ್ಕೂಲ್ ನ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಶಿಕ್ಷಕರ ಜೊತೆಗೂಡಿ ಒಡ್ಡೂರು ಫಾರ್ಮ್‌ಗೆ ಭೇಟಿ ನೀಡಿದರು.

**ಸಂಪಾದಕೀಯ ಮಂಡಳಿ :** ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು : ನಾರಾಯಣ ಸೋಮಯಾಜಿ ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
ಕಾರ್ಯನಿರ್ವಾಹಕ ಸಂಪಾದಕರು : ಕೃಷ್ಣಪ್ರಸಾದ ಕಾಯರ್‌ಕಟ್ಟೆ ವ್ಯವಸ್ಥಾಪಕ ಸಂಪಾದಕರು : ಕುಶಾಲಪ್ಪ ಅಮ್ಟೂರು
ಸಹಸಂಪಾದಕರು : ಪ್ರೀತಿಕಾ (ಶಿಶುಮಂದಿರ), ಚೈತ್ರ ಬಿ.ಕೆ (ಪ್ರಾಥಮಿಕ ಶಾಲೆ), ರಾಜೇಶ್ವರಿ (ಪ್ರೌಢಶಾಲೆ),
ಶ್ವೇತಾ (ಸೆಕೆಂಡರಿ ಸ್ಕೂಲ್) ಗೋವಿಂದ ನಾರಾಯಣ (ಪದವಿಪೂರ್ವ), ಪ್ರಸನ್ನಾ (ಪದವಿ)




Vigilance Awareness Week -22: ಬೆಸೆಂಟ್ ವಿದ್ಯಾಸಂಸ್ಥೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಂತಿಮ ವರ್ಷದ ಹರ್ಷಿತಾ ಎಸ್. ಹಾಗೂ ಕೀರ್ತಿ ಚರ್ಚಾ ಕೂಟದಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ.



"ಭವಿಷ್ ಘಟಕದ" ತರಗತಿ: 10.11.2022 2022–23ನೇ ಸಾಲಿನ "ಭವಿಷ್ಯ ಘಟಕದ" ತರಗತಿಯಲ್ಲಿ ಶ್ರೀ ಗಣಪತಿ ಹೆಗ್ಡೆಯವರು ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ ನಡೆಸಿದರು..



ಗೋವರ್ಧನೋತ್ಸವ ರಾಜ್ಯ ಮಟ್ಟದ ಜಾನಪದ ನೃತ್ಯ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ (29.10.2022) ಪಡೆದ ಪದವಿ ವಿದ್ಯಾರ್ಥಿಗಳು.



MATHS SHORT CUT TRICKS AND TIPS" ಎಂಬ ವಿಷಯದ ಕುರಿತು (29.11.22): ಸಂಪನ್ಮೂಲ ವ್ಯಕ್ತಿಯಾಗಿ IRC-MD ಶಿಕ್ಷಣ ಸಂಸ್ಥೆಯ ನಿರ್ದೇಶಕಿ ಶ್ರೀಮತಿ ಪ್ರಫುಲ್ಲ ಗಣೇಶ್ ಅವರು ಕಾರ್ಯಾಗಾರ ನಡೆಸಿ ಕೊಟ್ಟರು.



**NSS ಸಮವಸ್ತ್ರ ವಿತರಣೆ 25.11.22**

ರಾಮಕೃಷ್ಣ ಮಿಷನ್ ಮಂಗಳೂರು ವತಿಯಿಂದ ಸಮವಸ್ತ್ರ ವಿತರಣಾ ಕಾರ್ಯಕ್ರಮದಲ್ಲಿ ರಾಮಕೃಷ್ಣ ಮಿಷನ್‌ನ ಹಿರಿಯ ಕಾರ್ಯಕರ್ತ, ನಿವೃತ್ತ ಯೋಧ ಶ್ರೀ ಗೋಪಿನಾಥ್ ರಾವ್ ಸಮವಸ್ತ್ರ ವಿತರಣೆ ಮಾಡಿದರು.



**ಮಂಥನ ಕಾರ್ಯಕ್ರಮ 29.10.2022**

ಸೆಕ್ಯುಲರಿಸಂ ಮತ್ತು ರಾಷ್ಟ್ರೀಯತೆಯ ಬಗ್ಗೆ ನಡೆದ ಸಂವಾದ ಕಾರ್ಯಕ್ರಮವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಪ್ರಚಾರಕರಾದ ಮಾನ್ಯ ಶ್ರೀ ಸು. ರಾಮಣ್ಣನವರು ನಡೆಸಿಕೊಟ್ಟರು.








**ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಆಯೋಜಿಸಿದ ಕನ್ನಡ ಶಾಲೆಗಳ ಸಮ್ಮಾನ ಕಾರ್ಯಕ್ರಮವು** ಶ್ರೀರಾಮ ಪ್ರಾಥಮಿಕ ಶಾಲಾ ಆವರಣದಲ್ಲಿ 13.11.2022ರಂದು ನಡೆಯಿತು. ಡಾ. ಪ್ರಭಾಕರ ಭಟ್ ಕರ್ನಾಟಕದ ಆಯ್ದ 20 ಕನ್ನಡ ಶಾಲೆಗಳ ಪ್ರಮುಖರನ್ನು ಸನ್ಮಾನಿಸಿದರು. "ಕಲ್ಲಡ್ಕದಲ್ಲಿ ಈ ಕಾರ್ಯಕ್ರಮ ನಡೆಯುತ್ತಿರುವುದು ಅ.ಭಾ.ಸಾ.ಪ. ಗೆ ಒಂದು ಹೆಮ್ಮೆಯ ವಿಷಯ" ಎಂದು ಅಧ್ಯಕ್ಷ ಡಾ. ನಾ ಮೊಗಸಾಲೆ ಹೇಳಿದರು. ಅ.ಭಾ.ಸಾ.ಪದ ಪ್ರಾಂತ ಸಂಚಾಲಕ ಶ್ರೀ ನಾರಾಯಣ ಶೇವಿರೆ, ಕಾರ್ಯದರ್ಶಿ ಶ್ರೀ ರಘುನಂದನ್, ಶ್ರೀ ಮಾಧವ ಎಂ.ಕೆ, ಉಪಸ್ಥಿತರಿದ್ದರು. ಡಾ. ಪಾದೆಕಲ್ಲು ವಿಷ್ಣು ಭಟ್ ಸಮಾರೋಪ ಭಾಷಣ ಮಾಡಿದರು.


ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಛೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು
- ಚಿನ್ನಾಭರಣ ಸಾಲ – 10.5%
- ಜಾಮೀನು ಸಾಲ – 16%
- ಅಡವು ಸಾಲ – 13%
- ವಾಹನ ಸಾಲ – 11.5%
- ಗೃಹ ನಿರ್ಮಾಣ ಸಾಲ – 11%

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು
- 91ದಿನಗಳವರೆಗೆ – 6%
- 92ರಿಂದ 181 ದಿನಗಳು – 6.5%
- 182 ರಿಂದ 364 ದಿನಗಳು – 7.5%
- 1 ವರ್ಷ ಮತ್ತು ಮೇಲ್ಪಟ್ಟು – 8%

ಸೌಲಭ್ಯ
- ಆವರ್ತನ ಠೇವಣಿ (R.D)
- ಸಂಚಯ ಠೇವಣಿ (S.D)
- ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.



**Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24**

ಸರಯೂ

Vol. : 9 Issue :7 Rs. 10/-

KARKAN/2014/62363
Posted at Kalladka P.O. on 10th and 15th of Every month

SRI RAMA VIDYAKENDRA TRUST (R.) Hanuman Nagar, Kalladka, Bantwal Tq., Dakshina Kannada, Karnataka 574 222
Website : www.shriramakalladka.in / www.srvk.org E-mail : info@srvk.org


BOOK POST

ಸವಿಧೇ,


Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763 Printed at Digantha Mudrana Ltd. Magaluru 575008, Bantwal Tq., Dakshina Kannada, Karnataka. Registration No. : KARKAN/2014/62363